ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೧೧ನೇ ಫೆಬ್ರುವರಿ ೧೯೯೪ ಸಾಯನ ಸೌರ ಮಾಘ, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ ೯.೩೦ ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು **(ಶ್ರೀವಿ.ಎಸ್.ಕೌಜಲಗಿ)** ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಶ್ರೀ ಆತ್ಮಾನಂದರವರ ಪ್ರಶ್ನೆ ಸಂಖ್ಯೆ 44 (62) ಅನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ. ಹಾಗೆಯೇ ಶ್ರೀ ಕೆ.ಲಕ್ಷ್ಮಣ್ಣನವರ ಪ್ರಶ್ನೆ ಸಂಖ್ಯೆ 45(41) ಅನ್ನು ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರಿಗೆ ವರ್ಗಾಯಿಸಲಾಗಿದೆ.

ಕೈಗಾರಿಕಾ ಶೆಡ್ಡುಗಳ ನಿರ್ಮಾಣ ಕುರಿತು.

40 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993ನೇ ಡಿಸೆಂಬರ್ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಎಷ್ಟು ಶೆಡ್ಡುಗಳನ್ನು ನಿರ್ಮಿಸಲಾಗಿದೆ. ಹಾಗೂ ಎಲ್ಲೆಲ್ಲಿ ನಿರ್ಮಿಸಲಾಗಿದೆ. (ವಿವರ ನೀಡುವುದು)

ಆ) ಅದಕ್ಕಾಗಿ ಎಷ್ಟು ಎಕರೆ ಜಮೀನು ನೀಡಲಾಗಿದೆ.

ಇ) 1993ನೇ ಡಿಸೆಂಬರ್‌ವರೆಗೆ ಎಷ್ಟು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಹಾಗೂ ಎಷ್ಟು ಬಂಡವಾಳ ವಿಧಿಸಲಾಗಿದೆ. (ವಿವರ ನೀಡುವುದು)

ಈ) ಅದರಿಂದಾಗಿ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರಕಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಅ) 1993ನೇ ಡಿಸೆಂಬರ್ ಅಂತ್ಯದವರೆಗೆ 284 ಶೆಡ್ಡುಗಳನ್ನು ಈ ಕೆಳಗೆ ವಿವರಿಸಿದ ಸ್ಥಳಗಳಲ್ಲಿ ನಿರ್ಮಿಸಲಾಗಿದೆ.

ಪೂರ್ಣ ಹೊಂದಿರುವುದು.

1. ಯೆಯ್ಯೂಡಿ	-	58 ಶೆಡ್ಡುಗಳು
2) ಬೈಕಂಪಾಡಿ	-	152 ಶೆಡ್ಡುಗಳು
3) ಮಣಿಪಾಲ	-	44 ಶೆಡ್ಡುಗಳು
4) ಕಾರ್ಕಳ	-	10 ಶೆಡ್ಡುಗಳು
5) ಮೂಡಬಿದ್ರೆ	-	8 ಶೆಡ್ಡುಗಳು
6) ಕೋಟೇಶ್ವರ	-	12 ಶೆಡ್ಡುಗಳು
		284

ಆ) 105.17 ಎಕರೆ ಜಮೀನು ನೀಡಲಾಗಿದೆ.

ಇ) 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಹಾಗೂ ರೂ.16, 625.79 ಲಕ್ಷ ಬಂಡವಾಳ ಹೂಡಲಾಗಿದೆ.

ಈ) 67, 184 ಜನರಿಗೆ ಉದ್ಯೋಗಾವಾಕಾಶ ದೊರೆತಿದೆ.

ಶ್ರೀ ಬಿ.ಎಂ. ಇದಿನಬ್ಬ : ಸನ್ಮಾನ್ಯ ಅಧ್ಯಕ್ಷರೆ, ಬಂದರುಗಳ ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆಯೆಂದು ನಾನು ಕೇಳಿರುವ ಪ್ರಶ್ನೆಗೆ ಉತ್ತರಿಸಿದ್ದಾರೆ. ಕೈಗಾರಿಕೆಗಳ ಬಗ್ಗೆ ನಾವು ಆಲೋಚಿಸುವುದು ಬಹಳ ಕಡಿಮೆಯೆಂದು ಕಾಣಿಸುತ್ತದೆ. ಆದುದರಿಂದ, ಸಣ್ಣ ಕೈಗಾರಿಕೆಗಳನ್ನು ವಿಸ್ತೃತವಾಗಿ ಇನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುವುದಕ್ಕೆ ತಾವು ಮನಸ್ಸು ಮಾಡುತ್ತೀರಾ?

ಶ್ರೀ ಸಿ.ಆರ್. ಸಗೀರ್ ಅಹಮದ್ ಮಾನ್ಯ ಅಧ್ಯಕ್ಷರೆ, 1993-94ನೇ ಸಾಲಿನವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರ ಬಹಳ ಆಸಕ್ತಿಯಿಂದ ಕೈಗಾರಿಕಾ ನೀತಿಯಲ್ಲಿ ಬಹಳಷ್ಟು ಪ್ರೋತ್ಸಾಹ ಕೊಡುವ ಕುರಿತು ಈಗಾಗಲೇ ಹೊಸ ನೀತಿಯೊಂದನ್ನು ಅಳವಡಿಸಿಕೊಂಡಿದೆ. ಆ ದೃಷ್ಟಿಯಿಂದ ಆ ಭಾಗಗಳಲ್ಲಿ ಕೈಗಾರಿಕೋದ್ಯಮಿಗಳು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬಂದರೆ ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪ್ರೋತ್ಸಾಹ ಕೊಡುವುದರ ಜೊತೆಗೆ ಸಹಾಯಧನವನ್ನು ಸಹ ಒದಗಿಸಿ ಕೊಡುವುದಕ್ಕೆ ಸರ್ಕಾರ ಸದಾ ಸಿದ್ಧವಾಗಿದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : 1993ನೇ ಡಿಸೆಂಬರ್‌ವರೆಗೆ 9,972 ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಒಟ್ಟು 16,625.79 ಲಕ್ಷ ರೂಪಾಯಿಗಳ ಬಂಡವಾಳ ಹೂಡಲಾಗಿದೆಯೆಂದು ಹೇಳಿದ್ದೀರಿ. ಬಂಡವಾಳ ಹೂಡಿಕೆಗನುಗುಣವಾಗಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಅಲ್ಲಿ ಲಾಭದಾಯಕವಾಗಿ ನಡೆಯುತ್ತಿವೆಯೇ ಮತ್ತು ಸರಿಯಾಗಿ ಕೆಲಸಗಳು ನಡೆಯುತ್ತಿವೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಅನೇಕ ಸಣ್ಣ ಕೈಗಾರಿಕೆಗಳು ಆ ಜಿಲ್ಲೆಯಲ್ಲಿ ಬಹಳ ಉತ್ತಮವಾದ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ, ಕೆಲವು ಕೈಗಾರಿಕೆಗಳು ಮಾತ್ರ ರೋಗಗ್ರಸ್ತವಾಗಿವೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ, ಕೈಗಾರಿಕೆಗಳನ್ನು ಸುವ್ಯವಸ್ಥಿತವಾಗಿ ನಡೆಸುವುದರ ಬಗ್ಗೆ ಸರ್ಕಾರ ಆಗಲೇ ಅನೇಕ ತೀರ್ಮಾನಗಳನ್ನು ಕೈಗೊಂಡಿದ್ದು, ಮುಂಬರುವ ದಿನಗಳಲ್ಲಿ ಕೈಗಾರಿಕೆಗಳನ್ನು ಬಹಳ ಉತ್ತಮವಾಗಿ ನಡೆಸುವಂಥ ಅವಕಾಶಗಳು ಸಾಕಷ್ಟಿದೆ. ಅದಕ್ಕಾಗಿ ಸರ್ಕಾರ ಪ್ರೋತ್ಸಾಹ ಕೊಡುವುದಕ್ಕೆ 'ಸಿಂಗಲ್ ವಿಂಡೋ ವಿಜಿನ್ಸಿ' ಎಂದು ನಾವೇನು ರೂಪಿಸಿಕೊಂಡಿದ್ದೇವೆ, ಅದರ ಮುಖೇನ ಪ್ರೋತ್ಸಾಹ ನೀಡಲಾಗುತ್ತದೆ.

ತುಮಕೂರು ಮಹಾನಗರ ಸಭೆ ರಚಿಸುವ ಬಗ್ಗೆ

174 (ಎ) - ಶ್ರೀ ಶಫಿ ಅಹಮದ್, (ತುಮಕೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಮಹಾನಗರ ಸಭೆಯನ್ನು ರಚಿಸುವಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು)

ಅ) ಕೆ.ಎಂ.ಸಿ.ಕಾಯ್ದೆ 1976ರ ಕಲಂ (3)ರಡಿಯಲ್ಲಿ ತುಮಕೂರು ಮಹಾನಗರಸಭೆಯನ್ನು ರಚಿಸಲು ಸರ್ಕಾರವು ದಿನಾಂಕ 17-5-93ರಂದು ಒಂದು ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿತು. ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರಲ್ಲಿ ಮುನ್ಸಿಪಲ್